ತಾಯಲೂರು ತಿಮ್ಮರಾವತನ ಹಳ್ಳಿ ರಸ್ತೆಗೆ ಸೇತುವೆ ನಿರ್ಮಾಣ

2491 - ಶ್ರೀ ಆರ್. ಶ್ರೀನಿವಾಸ್ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ತಾಲೂಕು ತಾಯಲೂರು ತಿಮ್ಮರಾವತನ ಹಳ್ಳಿ ರಸ್ತೆಯ 8ನೇ ಕಿ.ಮೀ. ನಲ್ಲಿರುವ ಸೇತುವೆ ನಿರ್ಮಾಣ 1987-88ನೇ ಇಸವಿಯಲ್ಲಿ ಮಂಜೂರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಇದುವರೆಗೆ ಆ ಸೇತುವೆ ನಿರ್ಮಾಣವಾಗದಿರಲು ಕಾರಣವೇನು.

ಇ) ಅದನ್ನು ಯಾವಾಗ ಪೂರ್ಣ ಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ಸೇತುವೆಯು ನಿರ್ಮಾಣ ಜಿಲ್ಲಾ ಪರಿಷತ್ ರಸ್ತೆಯಲ್ಲಿ (ತಿಮ್ಮರಾವತನ ಹಳ್ಳಿ) 1.50 ಲಕ್ಷ ರೂ. ವೆಚ್ಚದಲ್ಲಿ ಆಗಸ್ಟ್ 1988ರಲ್ಲಿ ಮಂಜೂರಾಗಿದೆ.

ಆ) ಈ ಕಾಮಗಾರಿಯು ಆಗಸ್ಟ್ 1989ರಲ್ಲಿ ಪೂರೈಸಬೇಕಿದ್ದು, ಗುತ್ತಿಗೆದಾರರಿಗೆ ಅಪಘಾತವಾಗಿದ್ದು ಕಾರ್ಯ ನಿರ್ವಹಿಸಲಾಗಿರುವುದಿಲ್ಲ.

ಇ) ಹಾಲಿ ಗುತ್ತಿಗೆಯನ್ನು ಈಗಾಗಲೇ ರದ್ದುಪಡಿಸಿದ್ದು, ಹೊಸದಾಗಿ ಗುತ್ತಿಗೆ ಕರೆದು ಕಾಮಗಾರಿಯನ್ನು ಕೈಗೊಂಡು ಆದಷ್ಟು ಬೇಗ ಪೂರೈಸಲಾಗುವುದು.

ಶ್ರೀ ಆರ್. ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ಈ ಕಾಮಗಾರಿಯು ಆಗಸ್ಟ್ 1989ರಲ್ಲಿ ಪೂರೈಸಬೇಕಿದ್ದು ಗುತ್ತಿಗೆದಾರರಿಗೆ ಅಪಘಾತವಾಗಿದ್ದು ಕಾರ್ಯ ನಿರ್ವಹಿಸಲಾಗಿರುವುದಿಲ್ಲ ಎಂದು ಹೇಳಿದ್ದಾರೆ. ಗುತ್ತಿಗೆದಾರರಿಗೆ ಅಪಘಾತವಾಗಿದ್ದು 1984ನೇ ಇಸವಿಯಲ್ಲಿ. ಈಗಾಗಲೇ ಆ ಗುತ್ತಿಗೆದಾರರಿಗೆ 60 ಸಾವಿರ ರೂಪಾಯಿಗಳನ್ನು ಸಹ ಸರ್ಕಾರದ ಕಡೆಯಿಂದ ಪಾವತಿ ಮಾಡಿದ್ದಾರೆ. ಆದರೆ ಆ ಸೇತುವೆ ಕೆಲಸವನ್ನು ಇನ್ನೂ ಕೂಡ ಪ್ರಾರಂಭ ಮಾಡಿಲ್ಲ. ಇದರಿಂದ ಸುಮಾರು 10 ರಿಂದ 15 ಹಳ್ಳಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದರ ಸಲುವಾಗಿ ಆದಷ್ಟು ಜಾಗ್ರತೆಯಾಗಿ ಈ ಸೇತುವೆಯ ನಿರ್ಮಾಣವನ್ನು ಮಾಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಈ ಸೇತುವೆಯ ನಿರ್ಮಾಣ ಜಿಲ್ಲಾ ಪರಿಷತ್ ರಸ್ತೆ ಅದರ ವ್ಯಾಪ್ತಿಯಲ್ಲಿ ಬರುವಂಥದ್ದು ಆಗಿದೆ.

ಅಧ್ಯಕ್ಷರು : ಶ್ರೀನಿವಾಸ್‌ರವರು ಆ ಕೆಲಸವನ್ನು ಎಕ್ಸ್‌ಪಿಡೈಟ್ ಮಾಡಿ ಎಂದು ಕೇಳುತ್ತಿದ್ದಾರೆ. ನಮ್ಮ ಅಧಿಕಾರಿಗಳಿಗೆ ಹೇಳಿ ಈ ಕೆಲಸವನ್ನು ಆದಷ್ಟು ಬೇಗ ಪೂರೈಸಲಾಗುವುದೆಂದು ನೀವು ಅವರಿಗೆ ಹೇಳಿ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, 1997ರ ನಂತರ ಹೊಸದಾಗಿ ಗುತ್ತಿಗೆ ಕರೆದು ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಜಿಲ್ಲಾಪರಿಷತ್‌ನವರಿಗೆ ಹೇಳಿದರೆ ಬೇಗ ಕೆಲಸ ಮಾಡಿಸಿಕೊಡುತ್ತಾರೆ.

ಬೀದರ್‌ನ ಕೈಗಾರಿಕಾ ತರಬೇತಿ ಸಂಸ್ಥೆಗೆ ಸೇರಿದ ಆಸ್ತಿಗಳು

2359 - ಶ್ರೀ ಸೈಯದ್ ಜುಲ್ಫಿಖರ್ ಹಶ್ಮಿ (ಬೀದರ್) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?